# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.316/2018                ಪಿ . ಡಬ್ಲುಃ 2**

| | |
|---|---|
| ಸಾಕ್ಷಿದಾರರ ಹೆಸರು | ದೇವರಾಜು |
| ವಾಸ್ತವ್ಯ | ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ** 29 -01 -2026. |

**ಪಾಟೀ ಸವಾಲುಃ  ಪ್ರತಿವಾದಿ ಪರ  ಶ್ರೀ  ಎ ಪಿ ಎಂ ಬಿ  ವಕೀಲರಿಂದಃ**

ವಾದಿ  ನಮ್ಮ ಗ್ರಾಮದವರು ಎಂದರೆ ಸರಿ.  ವಾದಿಯವರು ಪ್ರತಿವಾದಿಯ ವಿರುದ್ದ  ಏಕೆದಾವೆಯನ್ನು ಹಾಕಿರುತ್ತಾರೆ ಎಂದು ತಿಳಿದುಕೊಂಡಿರುವೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.  ಯಾವ ವಿಷಯಕ್ಕೆ ದಾವಾ ಹಾಕಿರುತ್ತಾರೆ ಎಂಬುದರ ಬಗ್ಗೆ ನನಗೆ ಅವರು ಹೇಳಿರುವುದಿಲ್ಲ. ಸಾಕ್ಷಿಗೆ ನಿಡಿ-1  ನ್ನು ತೋರಿಸಿ ಅದರಲ್ಲಿ ಪ್ರತಿವಾದಿರವರು  ನಿಂತು ಕೊಂಡಿರುತ್ತಾರೆ ಮತ್ತು  ಅಲ್ಲಿ ವಾದಿಯ ಮನೆ  ಇರುತ್ತದೆ ಎಂದರೆ ಸರಿ.  ನಿಡಿ-1ರ ಉತ್ತರಕ್ಕೆ ಪ್ರತಿವಾದಿರವರ ಜಮೀನು ಇರುವುದಿಲ್ಲ.  ವಾದಿಯವರು ಉತ್ತರಕ್ಕೆ ಪ್ರತಿವಾದಿಯವರ ಜಮೀನು ಇರುತ್ತದೆ ಎಂದು ಹೇಳಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು  ಉತ್ತರಕ್ಕೆ ಪ್ರತಿವಾದಿಯವರು ಜಮೀನು ಇರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯವರ ಮನೆಯ  ಅಕ್ಕ ಪಕ್ಕ ಎಷ್ಟು ಮನೆಗಳಿಗೆ ಎಂಬ ಪ್ರಶ್ನೆಗೆ ಸಾಕ್ಷಿಯು  ಉತ್ತರಕ್ಕೆ -ಒಂದು ಬಾವಿ ಮತ್ತು  ಸಾಕಮ್ಮರವರ ದೇವಸ್ಥಾನ , ದಕ್ಷಿಣಕ್ಕೆ- ಹಾಲಿನ ಡೈರಿ ಮತ್ತು ರಸ್ತೆ ,  ಪೂರ್ವಕ್ಕೆ -ರಸ್ತೆ ,  ಪಶ್ಚಿಮಕ್ಕೆ- ನಾಗರಾಜಪ್ಪರವರ ಜಮೀನು ಇರುತ್ತದೆ.  ವಾದಿಯವರ ಮನೆಯನ್ನು ಬಿಟ್ಟು ಅಲ್ಲಿ ಬೇರೆ ಯಾರ ವಾಸದ ಮನೆ ಇರುವುದಿಲ್ಲ ಎಂದರೆ ಸರಿ.  ನಾನು ವಾದಿಯವರು ಮನೆಯನ್ನು ನೋಡಿರುತ್ತೇನೆ.  ವಾದಿಯವವರ ಮನೆಯಿಂದ ಉತ್ತರಕ್ಕೆ ನಾಗರಾಜಪ್ಪ ಮತ್ತು ಪ್ರತಿವಾದಿಯವರ  ಉತ್ತರಕ್ಕೆ  ಹಿಡುವಳಿ ಜಮೀನು ಇರುತ್ತದೆ

ಎಂದರೆ ಸರಿಯಲ್ಲ. ವಾದಿಗೆ ಮನೆ ಹೇಗೆ ಬಂದಿರುತ್ತದೆ ಎಂಬುದರ ಬಗ್ಗೆ ನೀವು ದಾಖಲೆಗಳನ್ನು ನೋಡಿರುವೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿ ಹಾಕಿದ ದಾವಾ ಆಸ್ತಿಯ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸಾಕ್ಷಿಗೆ ಇನ್ನೊಂದು ಛಾಯಾಪ್ರತಿಯನ್ನು ತೋರಿಸಿದ್ದು ಅದು ನಿಪಿ–3 ಇದ್ದು ಅದರಲ್ಲಿ ವಾದಿಯವರ ಮನೆ ಇರುತ್ತದೆ ಮತ್ತು ಪ್ರತಿವಾದಿಯವರು ನಿಂತುಕೊಂಡಿರುತ್ತಾರೆ ಎಂದರೆ ಸರಿ. ವಾದಿ ಈ ದಾವಾ ಏಕೆ ಹಾಕಿರುತ್ತಾರೆ ಎಂಬುದರ ಬಗ್ಗೆ ನಿಮಗೆ ಗೊತ್ತಿಲ್ಲ, ಎಂದರೆ ಸರಿಯಲ್ಲ. ನಾನು ಅವರ ದಾವಾ ಸ್ವತ್ತಿಗೆ ಸಂಬಂದಪಟ್ಟ ದಾಖಲೆಗಳನ್ನು ಸಹ ನೋಡಿರುವುದಿಲ್ಲ ಮತ್ತು ನೀವು ವಾದಿಯವರ ಹೇಳಿದ ಬಳಿಕ ನ್ಯಾಯಾಲಯಕ್ಕೆ ಬಂದು ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ವಾದಿ ದಾವೆಯಲ್ಲಿ ನಮೂದು ಮಾಡಿರುವ ಚೆಕ್ಕುಬಂಧಿ ಸರಿ ಇರುವುದಿಲ್ಲ ಆದರೆ ನಾನು ಹೇಳಿದ ಚಕ್ಕುಬಂಧಿ ಸರಿ ಇರುತ್ತದೆ. ವಾದಿ ಮನೆ ಕಟ್ಟಿರುವ ಉತ್ತರಕ್ಕೆ ಪ್ರತಿವಾದಿಯವರು ಕ್ರಯಕ್ಕೆ ಪಡೆದು ಕೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ದಾವಾ ಶೆಡ್ಯೂಲ್ ಸ್ವತ್ತಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**